ಓ.ಎಸ್ ನಂ. 14/2020 ಪಿ.ಡಬ್ಲೂ: 1

ದಿನಾಂಕಃ 10.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಮುಂದುವರೆದ ಪಾಟೀಸವಾಲು 1 ಮತ್ತು 2 ನೇ ಪ್ರತಿವಾದಿಗಳ ಪರವಾಗಿ ಶ್ರೀ. ಎ.ಜಿ.ಪಿ. ರವರಿಂದ: :

ನನ್ನ ತಂದೆ 1996 ಹಾಗೂ 2000 ನೇ ಇಸವಿಗಳಲ್ಲಿ ಆಸ್ತಿಗಳನ್ನು ಖರೀದಿ ಮಾಡಿರುತ್ತಾರೆ. ದೊಡ್ಡಕಾಡನೂರು ಗ್ರಾಮದ ಸರ್ವೆ ನಂಬರ್ 220/1 ರಲ್ಲಿ 1 ಎಕರೆ 31 ಗುಂಟೆ ಜಮೀನನ್ನು 1996 ರಲ್ಲಿ ನನ್ನ ತಂದೆ ಖರೀದಿ ಮಾಡಿರುತ್ತಾರೆ. ನಂತರ ಮತ್ತೆ 2000 ನೇ ಇಸವಿಯಲ್ಲಿ ಅದೇ ದೊಡ್ಡಕಾಡನೂರು ಗ್ರಾಮದ ಸರ್ವೆ ನಂಬರ್ 220/1 ರಲ್ಲಿ 1 ಎಕರೆ 31 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ. ಈ ಎರಡು ಆಸ್ತಿಗಳನ್ನು ನಾನು ಮತ್ತು ನನ್ನ ಸಹೋದರರು ವಿಭಾಗ ಮಾಡಿಕೊಂಡಿರುತ್ತೇವೆ. ವಿಭಾಗದಲ್ಲಿ 2 ಜಮೀನು ಒಟ್ಟು ಸೇರಿ ನನ್ನ ಪಾಲಿಗೆ 1 ಎಕರೆ 19 ಗುಂಟೆ ಬಂದಿರುತ್ತದೆ. ಈ ಎಲ್ಲಾ ವಿಚಾರಗಳನ್ನು ನಾನು ನನ್ನ ದಾವೆಯಲ್ಲಿ ಹೇಳಿ ಬರೆಸಿದ್ದೇನೆ.

ನಮ್ಮ ಊರಿನಲ್ಲಿ ಕೃಷಿ ಪತ್ತಿನ ಸೇವಾ ಸಹಕಾರ ಸಂಘ ಯಾವ ವರ್ಷದಲ್ಲಿ ಪ್ರಾರಂಭವಾಗಿದೆ ಎಂದು ನನಗೆ ನೆನಪಿಲ್ಲ. 2 ನೇ ಪ್ರತಿವಾದಿ ಕಟ್ಟಡ ಕಟ್ಟಿ ಎಷ್ಟು ವರ್ಷ ಆಗಿದೆ ಎಂದು ನನಗೆ ಮತ್ತು ನನ್ನ ತಂದೆಗೆ ಗೊತ್ತಿಲ್ಲ. ಸೊಸೈಟಿಯನ್ನು ಕಟ್ಟಡ ಕಟ್ಟಲು 2 ನೇ ಪ್ರತಿವಾದಿ ಪರವಾನಗಿ ಪಡೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಸೊಸೈಟಿಯು ನನ್ನ ತಾಯಿಯ ಹೆಸರಿನಲ್ಲಿ ಇರುವ ಆಸ್ತಿಯಲ್ಲಿ ಇದೆ. ಸೋಟೈಟಿ ಕಟ್ಟಡದ ಚೆಕ್ ಬಂಧಿಯು ಪೂರ್ವಕ್ಕೆ : ಹಾಸನ - ಮೈಸೂರು ರಸ್ತೆ, ಪಶ್ಚಿಮಕ್ಕೆ : ಆಚಾರ್ಯರ ಜಮೀನು, ಉತ್ತರಕ್ಕೆ : ಅಂಕಪ್ಪನವರ ಜಮೀನು, ದಕ್ಷಿಣಕ್ಕೆ : ಗ್ರಾಮ ಠಾಣಾ ಎಂದರೆ ಸಾಕ್ಷಿ ದಕ್ಷಿಣಕ್ಕೆ ಗ್ರಾಮ ಠಾಣಾ ಇಲ್ಲ ಅಲ್ಲಿ ನಮ್ಮದೇ ಆಸ್ತಿ ಇದೆ ಅಂತ ನುಡಿಯುತ್ತಾರೆ. ಸೊಸೈಟಿ ಕಟ್ಟಡದ ದಕ್ಷಿಣಕ್ಕೆ ಸಾರ್ವಜನಿಕ ಗ್ರಂಥಾಲಯ ಇದೆ ಎಂದರೆ ಸಾಕ್ಷಿ ಗ್ರಂಥಾಲಯ ಇದೆ ಆದರೆ ಅದು ನಮ್ಮ ಆಸ್ತಿಯಲ್ಲಿದೆ ಎಂದು ನುಡಿಯುತ್ತಾರೆ.

ದಿನಾಂಕ : 18.03.1977 ರಲ್ಲಿ 2 ನೇ ಪ್ರತಿವಾದಿ ಪರವಾನಗಿ ಪಡೆದು ಸೊಸೈಟಿ ಕಟ್ಟಡ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ನಾನು ಪರವಾನಗಿ ಪತ್ರ ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ಖಾತಾ ಎಕ್ಸ್‌ಟ್ರಾಕ್ಟ್‌ನ್ನು ಸಹಾ 2 ನೇ ಪ್ರತಿವಾದಿ ಸಹಕಾರಿ ಸಂಘದ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ಇತ್ತಿಚೆಗೆ ಅವರು ಖಾತೆಯನ್ನು ಮೋಸದಿಂದ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಖಾತಾ ಎಕ್ಸ್‌ಟ್ರಾಕ್ಟ್ ಅನ್ನು 24*40 ಅಡಿ ಅಳತೆಗೆ 2 ನೇ ಪ್ರತಿವಾದಿ ಯಾವುದೇ ಅಧೀಕೃತ ದಾಖಲಾತಿಗಳು ಇಲ್ಲದೇ ಮಾಡಿಸಿಕೊಂಡಿರುತ್ತಾರೆ. ಈಗ ನಾನು ನೋಡುತ್ತಿರುವ ಖಾತಾ ಎಕ್ಸ್‌ಟ್ರಾಕ್ಟ್ 2 ನೇ ಪ್ರತಿವಾದಿಯ ಹೆಸರಿಗೆ ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಖಾತಾ ಎಕ್ಸ್ ಟ್ರಾಕ್ಟ್ ಅನ್ನು ಮೋಸದಿಂದ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಖಾತಾ ಎಕ್ಸ್ ಟ್ರಾಕ್ಟ್ ಅನ್ನು ಅಭಿಮುಖವಾಗಿ ಗುರುತಿಸಿದ್ದರಿಂದ ನಿ.ಡಿ. 1 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಫೋಟೋದಲ್ಲಿರುವ ಕಟ್ಟಡ 2 ನೇ ಪ್ರತಿವಾದಿ ಸೊಸೈಟಿಯ ಕಟ್ಟಡ ಇರುತ್ತದೆ ಎಂದರೆ ಸರಿ. ಸಾಕ್ಷಿ ಸದರಿ ಫೋಟೋವನ್ನು ನೋಡಿ ಗುರುತಿಸಿದ್ದರಿಂದ ಅಭಿಮುಖವಾಗಿ ನಿ.ಡಿ. 2 ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಫೋಟೋದಲ್ಲಿ 2 ನೇ ಪ್ರತಿವಾದಿಯ ಸೊಸೈಟಿಯ ಕಟ್ಟಡ ಹಾಗೂ ಪಕ್ಕದಲ್ಲಿ ಕಾಣುತ್ತಿರುವುದು ನಮ್ಮ ಮನೆ ಎಂದರೆ ಸರಿ. ಸಾಕ್ಷಿ ಸದರಿ ಫೋಟೋಗಳನ್ನು ನೋಡಿ ಗುರುತಿಸಿದ್ದರಿಂದ ಕ್ರಮವಾಗಿ ನಿ.ಡಿ. 3 & 4 ಎಂದು, ಸಾಕ್ಷಿದಾರರ ಮನೆ ಕಟ್ಟಡವನ್ನು ನಿ.ಡಿ. 3(ಎ) ಮತ್ತು 4(ಎ) ಎಂದು ಗುರುತಿಸಲಾಯಿತು. ಈಗ ನಾನು ನೋಡುತ್ತಿರುವ ಫೋಟೋಗಳಲ್ಲಿ ಕಾಣುತ್ತಿರುವುದು ನಮ್ಮ ಮನೆ ಹಾಗೂ ನಮ್ಮ ಮನೆಯ ಕಾಂಪೌಂಡ್ ಎಂದರೆ ಸರಿ. ಸಾಕ್ಷಿ ಸದರಿ ಫೋಟೋಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಅಭಿಮುಖವಾಗಿ ನಿ.ಡಿ. 5 ರಿಂದ 8 ಎಂದು ಗುರುತಿಸಲಾಯಿತು.

ನಿ.ಡಿ. 2 ರಲ್ಲಿ ಕಾಣುತ್ತಿರುವ 2 ನೇ ಪ್ರತಿವಾದಿಯ ಕಟ್ಟಡ ಕಟ್ಟಿ ಈಗ 40 – 45 ವರ್ಷ ಆಗಿದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸೊಸೈಟಿ ಕಟ್ಟಿದಾಗ ಅದರ ಸುತ್ತಲೂ ಸಹಾ ಖಾಲಿ ಜಾಗ ಇರುತ್ತದೆ ಎಂದರೆ ಸಾಕ್ಷಿ ಈಗಲೂ ಸಹಾ ಸುತ್ತಲೂ ಖಾಲಿ ಜಾಗ ಇದೆ, ಸದರಿ ಖಾಲಿ ಜಾಗ ನಮ್ಮದೇ ಇರುತ್ತದೆ ಎಂದು ನುಡಿಯುತ್ತಾರೆ. 2014 ರಲ್ಲಿ ನಾನು ಪರವಾನಗಿ ಪಡೆದು ಮನೆ ಕಟ್ಟಿರುತ್ತೇನೆ. ಕಟ್ಟಡ ಪರವಾನಗಿ ಪ್ರತಿಯನ್ನು ನ್ಯಾಯಾಲಯಕ್ಕೆ ನಾನು ಹಾಜರುಪಡಿಸಿರುತ್ತೇನೆ. ನಿ.ಡಿ. 5 ರಲ್ಲಿ ಕಾಣುತ್ತಿರುವ ಸಜ್ಜ 2 ನೇ ಪ್ರತಿವಾದಿಯ ಕಟ್ಟಡಕ್ಕೆ ಹೊಂದಿಕೊಂಡಂತೆ ಇದ್ದು, ನಡುವೆ ಎಷ್ಟು ಅಂತರ ಇದೆ ಎಂದರೆ ಸಾಕ್ಷಿ 1 ಅಡಿ ಅಂತರ ಇದೆ ಆದರೆ ಅದಲ್ಲೆವೂ ನಮ್ಮದೇ ಜಾಗ ಆಗಿರುವುದರಿಂದ ನಾವು ಆ ರೀತಿ ಸಜ್ಜ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಿ.ಡಿ. 8 ರಲ್ಲಿ ಕಾಣುವಂತೆ ನನ್ನ ಕಾಂಪೌಂಡ್ ಅನ್ನು ಸೊಸೈಟಿಯ ಕಟ್ಟಡಕ್ಕೆ ಅಂಟಿಸಿಕಟ್ಟಿದ್ದೇನೆ ಎಂದರೆ ಸರಿ. ನಾನು ಯಾವುದೇ ಸೆಟ್ ಬ್ಯಾಕ್ ಬಿಡದೇ ನನ್ನ ಕಟ್ಟಡ ಕಟ್ಟಿಕೊಂಡಿರುತ್ತೇನೆ ಎಂದರೆ ಸಾಕ್ಷಿ ಎಲ್ಲವೂ ನಮ್ಮದೇ ಜಾಗ ಇರುವುದರಿಂದ ನಾನು ನನ್ನ ಅನುಕೂಲಕ್ಕೆ ತಕ್ಕಂತೆ ಕಟ್ಟಡ ಮತ್ತು ಕಾಂಪೌಂಡ್ ಅನ್ನು ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿ.ಡಿ. 6 ರಲ್ಲಿ ಬಿಳಿ ಬಣ್ಣದಿಂದ ಕಾಣುವ ಮುಂದೆ ಇರುವ ಕಾಂಪೌಂಡ್ ಸುಮಾರು 15 ಅಡಿ ಇದೆ ಎಂದರೆ ಸಾಕ್ಷಿ ಅಷ್ಟೇನು ಇಲ್ಲ ಸುಮಾರು 10 ಅಡಿ ಇರಬಹುದು ಎಂದು ನುಡಿಯುತ್ತಾರೆ. ನಿ.ಡಿ. 4 ರಲ್ಲಿ ಕಾಣುವ ಸೊಸೈಟಿ ಕಟ್ಟಡ ಹಾಗೂ ನಿಮ್ಮ ಕಟ್ಟಡದ ನಡುವೆ ಎಷ್ಟು ಅಂತರ ಇದೆ ಎಂದರೆ ಸಾಕ್ಷಿ 6 ಅಡಿ ಅಂತರ ಇದೆ ಎಂದು ನುಡಿಯುತ್ತಾರೆ.

ಸೊಸೈಟಿ ಕಟ್ಟುವಾಗ 10 ಅಡಿ ಸುತ್ತಳತೆ ಬಿಟ್ಟು ಕಟ್ಟಡ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸಾರ್ವಜನಿಕರು ಬಂದು ಸರದಿಯಲ್ಲಿ ನಿಲ್ಲಲು ಅನುಕೂಲವಾಗುವಂತೆ 10 ಅಡಿ ಸುತ್ತಳತೆ ಬಿಟ್ಟು ಕಟ್ಟಡ ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆ ಖರೀದಿ ಮಾಡುವುದಕ್ಕಿಂತ ಪೂರ್ವದಲ್ಲಿಯೇ ಸೊಸೈಟಿಯ ಕಟ್ಟಡ ನಿ.ಡಿ. 4 ರಲ್ಲಿ ತೋರಿಸಿರುವಂತೆ ಇತ್ತು ಎಂದರೆ ಗೊತ್ತಿಲ್ಲ. ನನ್ನ ತಂದೆ ಖರೀದಿ ಮಾಡಿದ ಆಸ್ತಿಯ ಚೆಕ್‌ಬಂಧಿಗಳನ್ನು ಹೇಳಲು ಬರುವುದಿಲ್ಲ. ನಾನು ಹಾಜರುಪಡಿಸಿದ

ನಿ.ಪಿ. 3 ರಲ್ಲಿ ಖರೀದಿಸಿದ ಆಸ್ತಿಯ ಚೆಕ್‌ಬಂಧಿ ವಿವರಣೆಯಲ್ಲಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನೀರಾವರಿ ಇಲಾಖೆಯವರು ಸ್ವಾಧೀನ ಪಡಿಸಿಕೊಂಡಿರುವ 32 ಗುಂಟೆ ಜಮೀನು, ಉತ್ತರಕ್ಕೆ ಮಾರಾಟ ಮಾಡಿರುವವರ ಜಮೀನು, ದಕ್ಷಿಣಕ್ಕೆ ಚಿಕ್ಕಚಾರ್ ರವರ ಮಕ್ಕಳ ಜಮೀನು ಎಂದು ಬರೆದಿರುತ್ತಾರೆ ಎಂದರೆ ಸರಿ.

2013 ರಲ್ಲಿ ನಾವು ವಿಭಾಗ ಪತ್ರ ಮಾಡಿಕೊಂಡಿರುತ್ತೇವೆ. ವಿಭಾಗದಲ್ಲಿ ನನಗೆ ಎರಡು ಸರ್ವೆ ನಂಬರ್ ಸೇರಿ 1 ಎಕರೆ 19 ಗುಂಟೆ ಬಂದಿರುತ್ತದೆ. ಪಾಲು ವಿಭಾಗ ಮಾಡಿಕೊಳ್ಳುವುದಕ್ಕಿಂತ ಮೊದಲೇ ಜಮೀನು ಅನ್ಯ ಸಂಕ್ರಮಣ ಆಗಿತ್ತು. ಅನ್ಯಸಂಕ್ರಮಣವನ್ನು 2005 ರಲ್ಲಿ ಆಗಿರಬಹುದು. ಅನ್ಯ ಸಂಕ್ರಮಣ ಸಮಯಕ್ಕೆ ಆಸ್ತಿಯ ಚೆಕ್‌ಬಂಧಿಯನ್ನು ತೋರಿಸುವಾಗ ಚೆಕ್‌ಬಂಧಿಯಲ್ಲಿ ಯಾವ ಕಡೆಯಾದರೂ ಸೊಸೈಟಿಯ ಕಟ್ಟಡದ ಬಗ್ಗೆ ಹೇಳಿರುತ್ತೀರ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ, ಅದು ನನ್ನ ತಂದೆಗೆ ಗೊತ್ತು ಎಂದು ನುಡಿಯುತ್ತಾರೆ. ಅನ್ಯ ಸಂಕ್ರಮಣದಲ್ಲಿ ನನಗೆ 8 ಗುಂಟೆ ಬಂದಿರುತ್ತದೆ, ಅದು ಪೂರ್ವ ಪಶ್ಚಿಮ 106+117 ಅಡಿ, ಉತ್ತರ ದಕ್ಷಿಣ 59+97 ಅಡಿ, ಒಟ್ಟು 8,697 ಚದರ ಅಡಿ ಬಂದಿರುತ್ತದೆ. ಇದರ ಚೆಕ್‌ಬಂಧಿ ಅಂದರೆ ಪೂರ್ವಕ್ಕೆ : ಸರ್ಕಾರಿ ರಸ್ತೆ ಮತ್ತು ಸಹಕಾರಿ ಸೊಸೈಟಿ, ಪಶ್ಚಿಮಕ್ಕೆ : ನನ್ನ ತಮ್ಮ ಪರಮೇಶ್ವರನ ಸ್ವತ್ತು, ಉತ್ತರಕ್ಕೆ : ಜಗದೀಶ್ವರ್ ರವರ ಸ್ವತ್ತು, ದಕ್ಷಿಣಕ್ಕೆ : ಪಾರ್ವತಮ್ಮ ಮತ್ತು ಗಣೇಶ್ ರವರ ಸ್ವತ್ತು ಹಾಗೂ ನನ್ನ ತಾಯಿ ನಿಂಗಾಜಮ್ಮನ ಸ್ವತ್ತು ಬರುತ್ತದೆ.

ನಾನು ಯಾವುದೇ ಕಟ್ಟಡ ಪರವಾನಗಿ ಪಡೆಯದೇ ಅಕ್ರಮವಾಗಿ 2 ನೇ ಪ್ರತಿವಾದಿಗೆ ಸೇರಿದ ಕಟ್ಟಡದ ಜಾಗವನ್ನು ಒತ್ತುವರಿ ಮಾಡಿ ನನ್ನ ಕಟ್ಟಡ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಆಸ್ತಿಯಲ್ಲಿ ಒತ್ತುವರಿ ಮಾಡಿ ಕಾಂಪೌಂಡ್ ಹಾಕಿ ಅವರ ಕೆಲಸಕ್ಕೆ ಅಡ್ಡಿಪಡಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಆಸ್ತಿಯನ್ನು ಖರೀದಿ ಮಾಡುವುದಕ್ಕಿಂತ ಮೊದಲೇ ಹಾಗೂ ಅನ್ಯ ಸಂಕ್ರಮಣ ಮಾಡುವುದಕ್ಕಿಂತ ಮೊದಲೇ 2 ನೇ ಪ್ರತಿವಾದಿಯ ಕಟ್ಟಡ ಅಸ್ತಿತ್ವದಲ್ಲಿದ್ದು ಎಲ್ಲಾ ವಿಷಯಗಳು ಗೊತ್ತಿದ್ದರು ಸಹಾ ಪ್ರತಿವಾದಿಯರ ವಿರುದ್ದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ಸ್ವತ್ತನ್ನು ಅಕ್ರಮವಾಗಿ ಉಪಯೋಗಿಸುವ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೂ ಸೊಸೈಟಿಯ ಆಸ್ತಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರೂ ಸಹಾ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಾ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ.

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.